ಇ) ಸದರಿ ಬಿಲ್ಲುಗಳು ಪ್ರಾಸರ್-ಚಾನಲ್ ದಿಂದ ಬರದೇ ನೇರವಾಗಿ ಬೀದರ್ ಡಿವಿಜನ್‌ನಲ್ಲಿ ಹಾಜರುಪಡಿಸಿ ಹಣ ಪಡೆದ ಸಂಗತಿ ಸರ್ಕಾರಕ್ಕೆ ತಿಳಿಸಿದೆಯೆ?

ಈ) ಈ ವಿಷಯದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ

ಆ) ಬಂದಿದೆ. ಕ್ರಮ ತೆಗೆದುಕೊಂಡಿದೆ

ಇ) ಬಿಲ್ಲುಗಳು ನೇರವಾಗಿ ವಿಭಾಗಕ್ಕೆ ಬಂದಿರುವುದಿಲ್ಲ. ಸದರಿ ಬಿಲ್ಲುಗಳು ಸಂಶಯಾಸ್ಪದವಾಗಿರುವುದರಿಂದ ಪಾವತಿ ಮಾಡಿರುವುದಿಲ್ಲ.

ಈ) ಈ ವಿಷಯದ ಬಗ್ಗೆ ಈಗಾಗಲೇ ಸರ್ಕಾರದಿಂದ ಕ್ರಮ ಜರುಗಿಸಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ.

ಬೀದರ್ ತಾಲ್ಲೂಕಿನಲ್ಲಿ ಉಚಿತ ಕಾನೂನು ನೆರವು ಸಮಿತಿ ರಚನೆ

1044 (1473) ಶ್ರೀ ಗುಂಡಪ್ಪ ವಕೀಲ (ಬೀದರ್) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಬಂದು 1 1/2 ವರ್ಷ ಕಳೆದರೂ ಕೂಡ ಬೀದರ್ ತಾಲ್ಲೂಕಿನಲ್ಲಿ ಉಚಿತ ಕಾನೂನು ನೆರವು ಸಮಿತಿಗೆ ಸದಸ್ಯರ ನೇಮಕಾತಿ ಆಗಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ರೀತಿ ವಿಳಂಬವಾಗಲು ಕಾರಣಗಳೇನು?

ಇ) ಸದರೀ ಸಮಿತಿಗೆ ಸದಸ್ಯರ ನೇಮಕ ಮಾಡುವುದೆಂದು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು

ಆ) ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ನಿಯಮ 1996ರ ನಿಯಮ 8(4)ರ ಪ್ರಕಾರ ತಾಲ್ಲೂಕಾ ಕಾನೂನು ಸೇವಾ ಸಮಿತಿಗೆ ಸಮಾಜಸೇವೆ, ಆಡಳಿತ, ಕಾನೂನು ಕ್ಷೇತ್ರಗಳಲ್ಲಿ ಅನುಭವವಿರುವುದರೊಂದಿಗೆ ದುರ್ಬಲ ವರ್ಗದ ಏಳಿಗೆಗಾಗಿ ಶ್ರಮಿಸುತ್ತಿರುವ ಮತ್ತು ಉಳಿತ ಕಾನೂನು ಯೋಜನೆ ಕಾರ್ಯಗತಗೊಳಿಸುವಲ್ಲಿ ಆಸಕ್ತಿ ಹೊಂದಿರುವ 8 ಜನರನ್ನು ಅಧಿಕಾರೇತರ ಸದಸ್ಯರುಗಳನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಬೇಕಿರುತ್ತದೆ. ಅದೂ ಅಲ್ಲದೇ, ಈ 8 ಅಧಿಕಾರೇತರ ಸದಸ್ಯರುಗಳ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದಿಂದ ತಲಾ ಒಬ್ಬ ಸದಸ್ಯರು ಮತ್ತು ಇಬ್ಬರು ಮಹಿಳೆಯರು ಇರಬೇಕಿರುತ್ತದೆ. ನಿಯಮಾನುಸಾರ ಪ್ರಸ್ತಾವನೆ ಸ್ವೀಕೃತವಾದ ಪ್ರಯುಕ್ತ ನಾಮನಿರ್ದೇಶನ ಮಾಡುವಲ್ಲಿ ವಿಳಂಬ ಉಂಟಾಗಿದೆ.

ಇ) ನಿಯಮಾನುಸಾರ ಪ್ರಸ್ತಾವನೆ ಸ್ವೀಕೃತವಾದಲ್ಲಿ ತಕ್ಷಣವೇ ನಾಮ ನಿರ್ದೇಶನ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಮಸೀದಿಗಳಿಗೆ ಹಣ ಬಿಡುಗಡೆ

1045 (1474) ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ವಕ್ಫ್ ಬೋರ್ಡ್‌ನಿಂದ ಮಸೀದಿ ನಿರ್ಮಾಣ ಕಾರ್ಯಗಳಿಗೆ ಹಣ ಬಿಡುಗಡೆ ಮಾಡುವಲ್ಲಿ ನಿರ್ಲಕ್ಷ್ಯ ತೋರುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, 2000ನೇ ಇಸವಿ ವಕ್ಫ್ಸ್ ಬೋರ್ಡ್ ಬಜೆಟ್‌ನಲ್ಲಿ ಎಷ್ಟು ಹಣ ಮೀಸಲಿಡಲಾಗಿದೆ (ಇಡೀ ಸ್ಟೇಟ್‌ಗೆ) ಅದರಲ್ಲಿ ಔರಾದ್‌ಗೆ ಒದಗಿಸಿರುವ ಹಣವೆಷ್ಟು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ಇಲ್ಲ

ಆ) 2000-2001ನೇ ಸಾಲಿನಲ್ಲಿ ಸರ್ಕಾರವು ರಾಜ್ಯದಲ್ಲಿ ಮಸೀದಿ ಮತ್ತು ದರ್ಗಾಗಳ ದುರಸ್ತಿ ಹಾಗೂ ನಿರ್ಮಾಣಕ್ಕಾಗಿ 3-00 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಪ್ರತಿಯೊಂದು ತಾಲ್ಲೂಕಿಗೆ ಹಣ ಮೀಸಲಿಡಲು ಸಹಾಯಾನುದಾನ ಸಂಹಿತೆಯ ನಿಯಮಾನುಸಾರ ಅವಕಾಶವಿರುವುದಿಲ್ಲ. ಆದರೂ ಔರಾದ್ ತಾಲ್ಲೂಕಿನ ವಕ್ಫ್ ಸಂಸ್ಥೆಗಳಿಗೆ 80,000-00 ರೂ.ಗಳನ್ನು ಒದಗಿಸಲಾಗಿದೆ.

ಔರಾದ್ ತಾಲ್ಲೂಕಿನಲ್ಲಿ ಪಶುಸಂಗೋಪನಾ ಇಲಾಖೆಯ ವಿಶೇಷ ಘಟಕ ಯೋಜನೆಯಲ್ಲಿ ಫಲಾನುಭವಿಗಳ ಆಯ್ಕೆ

1046 (1475) ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ಪಶುಸಂಗೋಪನೆ ಇಲಾಖೆಯು ಪ್ರತಿವರ್ಷ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿದೆಯೆ? (ಗ್ರಾಮ ಸಭೆಗಳಲ್ಲಿ)

ಆ) ಹಾಗಿದ್ದಲ್ಲಿ 1997 ರಿಂದ ಇಲ್ಲಿಯವರೆಗೆ ಫಲಾನುಭವಿಗಳ ವಿವರ ನೀಡುವುದು ಹಾಗೂ ಆಯ್ಕೆ ಫಲಾನುಭವಿಗಳ ಪಟ್ಟಿ ಗ್ರಾಮಸಭೆಗಳಲ್ಲಿ ಸಿದ್ಧಪಡಿಸಲಾಗಿದೆಯೇ?

ಇ) ಗ್ರಾಮಸಭೆಗಳಲ್ಲಿ ಫಲಾನುಭವಿಗಳ ಆಯ್ಕೆ ಮಾಡದೇ ಈ ಯೋಜನೆ ದುರುಪಯೋಗವಾಗುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?